ಆದ್ದರಿಂದ ನಾವು ಬೋಧಿವನಕ್ಕೇ ಹೋಗೋಣ. ಆ ವನದಲ್ಲಿ ಎಲ್ಲ ಜಾತಿಯ ಹೂಗಳೂ ಇವೆ. ಒಂದೊಂದು ಹೂವೂ ಒಂದೊಂದು ಬಣ್ಣ, ಒಂದೊಂದು ಆಕಾರ, ಬಗೆ ಬಗೆಯ ಪರಿಮಳ. ಅವುಗಳನ್ನು ನೋಡುವುದೇ ಒಂದು ಸೊಗಸು. ಆದ್ದರಿಂದ ಬೋಧಿವನದಿಂದಲೇ ಹೂ ಕೊಯ್ದು ತರೋಣ'

ಮಣಿಮೇಕಲೆಯು 'ಆಗಲಿ ಅಕ್ಕ, ಬೋಧಿವನಕ್ಕೇ ಹೋಗೋಣ. ಅಲ್ಲಿಂದಲೇ ಹೂ ತರೋಣ ನಡಿ' ಎಂದಳು.

'ಮರೆತಿದ್ದೆ ಮಣಿಮೇಕಲೆ, ಅಲ್ಲಿರುವ ಬೋಧಿವನದ ನಡುವೆ ಒಂದು ಸ್ಫಟಿಕ ಶಿಲಾ ಮಂದಿರವಿದೆ. ಅದನ್ನು ಇಲ್ಲಿನ ಜನ ಧ್ಯಾನ ಮಂದಿರ ಎಂದು ಕರೆಯುತ್ತಾರೆ. ಮಂದಿರದ ನಡುವೆ ಬುದ್ಧದೇವನ ಪಾದಪದ್ಮಗಳ ಶಿಲ್ಪಕೃತಿಯಿದೆ. ವಿಶೇಷವೆಂದರೆ, ಆ ಪಾದಪದ್ಮಗಳ ಮೇಲೆ ಹೂಗಳನ್ನು ಇಟ್ಟು ಪೂಜಿಸಿದರೆ, ಆ ಹೂವುಗಳು ಬಾಡುವುದೇ ಇಲ್ಲವಂತೆ! ಹೀಗೆಂದು ಜನ ಹೇಳುತ್ತಾರೆ. ಇಂದು ನಾವೂ ಕೂಡ ಬುದ್ಧಪಾದಗಳನ್ನು ಪೂಜಿಸಿ ಬರೋಣ' ಎಂದಳು ಸುಧಾಮತಿ.

ಮಣಿಮೇಕಲೆ ಮತ್ತು ಸುಧಾಮತಿ ಇಬ್ಬರೂ ಬೋಧಿವನದ ಕಡೆ ಹೆಜ್ಜೆ ಹಾಕಿದರು. ಹಾದಿಯಲ್ಲಿ ಬರುತ್ತಿರುವಾಗ ಇವರು ಜನರ ಕಡೆ ನೋಡದಿದ್ದರೂ, ಜನ ಇವರಿಬ್ಬರನ್ನು ನೋಡದೇ ಇರಲಿಲ್ಲ! ಬೆಳುದಿಂಗಳೇ ನಡೆದು ಬರುವಂತಿದ್ದ ಇವರನ್ನು ನೋಡಿದ ಕೆಲವರು 'ನಮ್ಮ ನಗರದಲ್ಲೇ ಇವಳಿಗೆ ಹೋಲಿಸುವಂತಹ ಅಪೂರ್ವ ಸೌಂದರ್ಯವತಿ ಇಲ್ಲ! ಇಂತಹ ಬೆಳುದಿಂಗಳ ಸುಂದರಿಯನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದಾಳಲ್ಲ ಆ ಮಾಧವಿ ! ಅವಳ ಹುಂಬತನಕ್ಕೆ ಏನನ್ನಬೇಕು? ಛೀ.... ಬದುಕುವ ದಾರಿ ಗೊತ್ತಿಲ್ಲದ ಹೆಣ್ಣು ಅದು' ಎಂದರು.

ಮತ್ತೊಬ್ಬ: 'ನಗರದ ಸುಂದರಿಯರನ್ನೆಲ್ಲಾ ತಂದು ಇವಳ ಕಾಲ ಬಳಿ ನಿವಾಳಿಸಿ ಎಸೆಯಬೇಕು! ಆದರೂ ಏನು ಪ್ರಯೋಜನ?' ಎಂದು ಚಪಲ ಚಿತ್ತದಿಂದ ಹೇಳಿದ ಕುಹಕದ ಮಾತುಗಳು ಮಣಿಮೇಕಲೆಗೆ ಕೇಳಿಸದೇ ಇರಲಿಲ್ಲ.

ಇನ್ನೊಬ್ಬ: 'ಇಂತಹ ಅಪೂರ್ವವಾದ ಹೆಣ್ಣು ರಾಜನ ಅರಮನೆಯಲ್ಲಿ ಇರಬೇಕಿತ್ತು! ಆದರೆ ಈಗ ಇವಳು ಬಿಚ್ಚೋಲೆ ಗೌರಮ್ಮನಂತೆ, ಆ ಸನ್ಯಾಸಿನಿಯರ ಜೊತೆಯಲ್ಲಿ ಊರ ಹೊರಗೆ ವಿಹಾರದಲ್ಲಿ ಅರೆಹೊಟ್ಟೆಯಲ್ಲಿ ತಿಂದುಕೊಂಡು ಬದುಕುತ್ತಿದ್ದಾಳಲ್ಲ! ಇವಳ ಬುದ್ಧಿಗೆ ಏನು ಹೇಳಬೇಕು?' ಎಂದನು.

ಸೂಜಿಯಂತೆ ಇರಿಯುವಂತಿದ್ದ ಜನರ ಮಾತುಗಳನ್ನು ಮಣಿಮೇಕಲೆ ಮತ್ತು ಸುಧಾಮತಿ ಕೇಳಿಸಿಕೊಂಡರು. ಜನರ ಮಾತುಗಳಿಂದ ವಿಚಲಿತರಾಗದೆ, ಯಾರನ್ನೂ ನಿಂದಿಸದೆ ನೆಟ್ಟಗೆ ಬೋಧಿವನಕ್ಕೆ ಬಂದರು.

* * *

ಅಂದು ಇಂದ್ರೋತ್ಸವ. ನಗರವನ್ನು ಇನ್ನಿಲ್ಲದಂತೆ ಸಿಂಗರಿಸಲಾಗಿತ್ತು. ಎಲ್ಲೆಲ್ಲೂ ಸಡಗರವೋ ಸಡಗರ. ಹಾಡುಗಾರರು, ಕಾವಡಿ ಮತ್ತು ಕರಗದ ನೃತ್ಯಗಾರರು, ಕೋಲು ಹುಯ್ಯುವವರು, ಜಾದುಗಾರರು ಅಲ್ಲಲ್ಲಿ ಗುಂಪುಗೂಡಿ ಜನರನ್ನು ರಂಜಿಸುತ್ತಿದ್ದರು. ಬೀದಿಗಳಲ್ಲಿ ಜನವೋ ಜನ! ಹೊಸ ಬಟ್ಟೆಗಳನ್ನು ತೊಟ್ಟ ಮಕ್ಕಳು ಬೀದಿ ತುಂಬಾ ಆಡುತ್ತಿದ್ದರು. ಬಗೆ ಬಗೆಯ ಬಣ್ಣದ ಬಟ್ಟೆಗಳನ್ನು ತೊಟ್ಟು, ದೇವಾಲಯಗಳಿಗೆ ಹೋಗುತ್ತಿದ್ದ ಯುವತಿಯರು, ಕಂಡಿದ್ದನ್ನೆಲ್ಲಾ ಕಣ್ಣಿಗೆ ತುಂಬಿಕೊಳ್ಳುತ್ತಿದ್ದ ಯುವಕರು ಎಲ್ಲೆಲ್ಲೂ:

ಶಬ್ದಗಳಿಲ್ಲದ ಅರ್ಥಗಳ ಭಾರವಿಲ್ಲದ ಕವಿತೆಗಳಂತೆ
ಅವರ ಕಣ್ಣುಗಳು
ಹೂವಿನಷ್ಟೇ ಹಗುರ ಅವರ ನಡಿಗೆ
ಕುಡಿನೋಟದಿಂದ ಹೂ ನಗೆಯ ಚೆಲ್ಲಿ
ಕೆಮ್ಮುಗಿಲ ಸಂಜೆ ಒಲುಮೆಯ ಗಾಳಿಯನ್ನು
ಹೊತ್ತು ತಂದಿತ್ತು
ಒರೆಸಿಹಾಕಿತ್ತು ಅವರ ಏಕಾಂತದ ಕಣ್ಣೀರನ್ನು
ಹೊಂಬೆಳಕಿನ ದೀಪವನ್ನು ಬೆಳಗಿಸಿತ್ತು ಅವರ
ಕಣ್ಣುಗಳಲ್ಲಿ
ಚಿಗುರಿಸಿತ್ತು ಹಗುರವಾದ ರೆಕ್ಕೆಗಳನ್ನು ಅವರ
ಕಿರಿದಾದ ಭುಜದ ಮೇಲೆ
ಮುಳುಗುವ ಸೂರ್ಯನನ್ನು ಕಣ್ಣೆತ್ತಿಯೂ
ನೋಡರು
ಏಕೆಂದರೆ, ಅವರ ಎದೆಯಲ್ಲಿ ಗೆಳೆಯನ ನೆನಪಿನ
ಚಂದಿರ ಮೂಡುತಲಿದ್ದ
ವಸಂತ ಋತು ಹೂಗುಚ್ಛ ನೀಡಿ ಅವರಿಗೆ ಶುಭ
ಕೋರಿತು
ತಾರೆಗಳು ಹೂಮಳೆಗರೆದವು